**2ನೇ ಪ್ರತಿವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರಡಿಯಲ್ಲಿನ ಮದ್ಯಂತರ ಅರ್ಜಿ ಸಂಖ್ಯೆ 12 ರ ಮೇಲಿನ ಆದೇಶ**

ಅರ್ಜಿದಾರರು/2ನೇ ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಮದ್ಯಂತರ ಅರ್ಜಿ ಸಂಖ್ಯೆ 12ನ್ನು ಸಲ್ಲಿಸಿ, ವಾದಿಯು ಸಲ್ಲಿಸಿದ ಮದ್ಯಕಾಲೀನ ಅರ್ಜಿಯ ಸಂಖ್ಯೆ-11ನ್ನು ಖರ್ಚಿನೊಡನೆ ಪುರಸ್ಕರಿಸಿದ್ದು, ಸದರಿ ಖರ್ಚನ್ನು ನ್ಯಾಯಾಲಯದಲ್ಲಿ ಠೇವಣಿ ರೂಪದಲ್ಲಿ ಇಡಲು ಅನುಮತಿ ಕೋರಿಕೊಂಡಿರುತ್ತಾರೆ.

2. ಅರ್ಜಿದಾರರು, ಅರ್ಜಿ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ಈ ಮೇಲ್ಕಂಡ ದಾವೆಯಲ್ಲಿ ವಾದಿಗಳು ಕ್ರಮಾದೇಶ-6 ನಿಯಮ 7 ರ ಅಡಿಯಲ್ಲಿ ಮಧ್ಯಕಾಲಿನ ಅರ್ಜಿ ಸಂಖ್ಯೆ-11 ನ್ನು ಸಲ್ಲಿಸಿರುತ್ತಾರೆ. ಸದರಿ ಮಧ್ಯಕಾಲಿನ ಅರ್ಜಿಯ ಮೇಲೆ ನ್ಯಾಯಾಲಯವು ಆದೇಶ ಮಾಡಿ ವಾದಿಯು ಸಲ್ಲಿಸಿದ ಮಧ್ಯಕಾಲಿನ ಅರ್ಜಿಯನ್ನು ರೂ.2500/-ಗಳ ಖರ್ಚಿನೊಡನೆ ಪುರಸ್ಕರಿಸಲಾಗಿರುತ್ತದೆ. ಸದರಿ ಆದೇಶವನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ. ಆದರೆ,ಸದರಿ ಸಂಗತಿಯನ್ನು ಅರ್ಜಿದಾರರು ವಕೀಲರಿಗೆ ತಿಳಿಸಲು ಸಾಧ್ಯವಾಗಿರುವುದಿಲ್ಲ. ಆ ವೇಳೆಯಲ್ಲಿ ವಕೀಲರು ಅರ್ಜಿದಾರರ ಗಮನಕ್ಕೆ ತರದೇ ದಿನಾಂಕ:28/01/2026 ರಂದು ನ್ಯಾಯಾಲಯವು ವಿಧಿಸಿದ ಖರ್ಚನ್ನು ಆಕಸ್ಮಿಕವಾಗಿ ಪಡೆದುಕೊಂಡಿರುತ್ತಾರೆ. ಆ ಸಂಬಂಧ ನ್ಯಾಯಾಲಯವು ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಅರ್ಜಿದಾರರು ಪಡೆದಿರುವ ಖರ್ಚನ್ನು ನ್ಯಾಯಾಲಯಕ್ಕೆ ಠೇವಣಿ ಇಡಲು ಅನುಮತಿ ಕೋರಿಕೊಂಡಿರುತ್ತಾರೆ.

3. ಸದರಿ ಮೇಲ್ಕಂಡ ಅರ್ಜಿಗೆ ವಾದಿಯು ತನ್ನ ತಕರಾರು ಸಲ್ಲಿಸಿದ್ದು, ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನು ಹಾಗೂ ವಾಸ್ತವಿಕವಾಗಿ ಹಾಗೂ ಊರ್ಜಿತವಾಗತಕ್ಕದ್ದಲ್ಲ ಎಂಬುದಾಗಿ ತಿಳಿಸಿರುತ್ತಾರೆ. 2ನೇ ಪ್ರತಿವಾದಿ ತನ್ನ ಅರ್ಜಿಯಲ್ಲಿ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 11 ನ್ನು ಪುರಸ್ಕರಿಸಿದ್ದು, ಆ ಸಂಬಂಧವಾಗಿ ವಾದಿಗಳು ವಾದ ಪತ್ರದಲ್ಲಿ ತಿದ್ದುಪಡಿ ಮಾಡಿ ನ್ಯಾಯಾಲಯವು ವಿಧಿಸಿದ ಖರ್ಚುನ್ನು ಪ್ರತಿವಾದಿ ಪರ ವಕೀಲರಿಗೆ ನ್ಯಾಯಾಲಯದ ಅನುಮತಿ ಮೇರೆಗೆ ವಾದ ಪತ್ರದ ಷೆಡ್ಯೂಲ್ ಅನ್ನು ಮತ್ತು ಮಧ್ಯಂತರ ಅರ್ಜಿ ಸಂಖ್ಯೆ 11 ರಲ್ಲಿ ತಿಳಿಸಿರುವ ವಿಷಯವನ್ನು ತಿದ್ದುಪಡಿ ಮಾಡಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 11ನ್ನು ದಿನಾಂಕ 07-01-2026 ರಂದು ಪುರಸ್ಕರಿಸದ ಮೇಲೆ ದಿನಾಂಕ 06-02-2026 ರಂದು ವಾದಪತ್ರಗಳನ್ನು ತಿದ್ದುಪಡಿ ಮಾಡಿದ್ದು, ಆ ಸಂಬಂಧವಾಗಿ ನ್ಯಾಯಾಲಯವು ಹೆಚ್ಚುವರಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಸಮಯವನ್ನು ನೀಡಿರುತ್ತದೆ. ವಾದ ಪತ್ರವನ್ನು ತಿದ್ದುಪಡಿ ಮಾಡಿ ಮಧ್ಯಂತರ ಅರ್ಜಿ ಸಂಖ್ಯೆಃ 11 ಆದೇಶವನ್ನು ವಾದಿಗಳು ಪೂರ್ಣಗೊಳಿಸಿದ ಮೇಲೆ ಪ್ರತಿವಾದಿ ಮಧ್ಯಂತರ ಅರ್ಜಿ ಸಂಖ್ಯೆ 12ನ್ನು ಸಲ್ಲಿಸಿರುತ್ತಾರೆ. ನ್ಯಾಯಾಲಯದ ಆದೇಶದ ಮೇರೆಗೆ ಪ್ರತಿವಾದಿ ಪರ ವಕೀಲರು ವಾದಿ ಪರ ವಕೀಲರಿಂದ

ನ್ಯಾಯಾಲಯವು ವಿಧಿಸಿದ ಖರ್ಚನ್ನು ಪಡೆದುಕೊಂಡು ದಾವೆಯ ಆದೇಶ ಪ್ರತಿಗೆ ಸಹಿಯನ್ನು ಹಾಕಿರುತ್ತಾರೆ. ಸದರಿ ಮಧ್ಯಂತರ ಅರ್ಜಿಯ ಆದೇಶವು ಪೂರ್ಣಗೊಂಡಂತೆ ಆಗಿರುತ್ತದೆ. ಪ್ರತಿವಾದಿ ಮಧ್ಯಂತರ ಅರ್ಜಿಯಲ್ಲಿ ತಿಳಿದಿರುವಂತೆ ನ್ಯಾಯಾಲಯವು ವಿಧಿಸಿದ ಖರ್ಚನ್ನು ಆಕಸ್ಮಿಕವಾಗಿ ಪ್ರತಿವಾದಿ ಪರ ವಕೀಲರು ಪಡೆದುಕೊಂಡಿಲ್ಲ ಮತ್ತು ಠೇವಣಿಯಿಡಲು ಬರುವುದಿಲ್ಲ. ಮಧ್ಯಂತರ ಅರ್ಜಿ ಸಂಖ್ಯೆ 11 ರ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಲ್ಲಿಸಿದಾಗ ಘನ ನ್ಯಾಯಾಲಯವು ಮಾಡಿದ ಆದೇಶವನ್ನು ಮಾತ್ರ ಪ್ರತಿವಾದಿ ಕ್ರಮ ವಹಿಸಬೇಕಾಗುತ್ತದೆ. ಘನ ನ್ಯಾಯಾಲಯವು ಮಾಡಿರುವ ಆದೇಶವನ್ನು ತಿದ್ದುಪಡಿ ಮಾಡಲು ಕಾನೂನಿನ ಅಡಿಯಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಪ್ರತಿವಾದಿ ಸಲ್ಲಿಸಿದ ಅರ್ಜಿಯನ್ನು ಖರ್ಚಿನೊಂದಿಗೆ ವಜಾಮಾಡಬೇಕೆಂದು ಕೋರಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಿದ ನಂತರ ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕೆಂಡ ಪ್ರಶ್ನೆಗಳು ಉದ್ಭವವಾಗಿರುತ್ತದೆ.

5. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಡಿಡಬ್ಲೂ-1 ರವರ ಪಾಟಿ ಸವಾಲಿನ ಹಂತದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 11 ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಿದ್ದು, ಈ ನ್ಯಾಯಾಲಯವು ಸದರಿ ಅರ್ಜಿಯನ್ನು ರೂ. 2,500/- ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಗಿರುತ್ತದೆ ಹಾಗೂ ಪ್ರತಿವಾದಿ ಪರ ವಕೀಲರು ತೆರದ ನ್ಯಾಯಾಲಯದಲ್ಲಿ ಸದರಿ ಖರ್ಚನ್ನು ಪಡೆದುಕೊಂಡಿರುತ್ತಾರೆ ವಾದಿಯು ನ್ಯಾಯಾಲಯದ ಆದೇಶದ ಮೇರೆಗೆ ವಾದಪತ್ರವನ್ನು ತಿದ್ದುಪಡಿ ಮಾಡಿ, ತಿದ್ದುಪಡಿ ವಾದಪತ್ರವನ್ನು ಸಹ ಸಲ್ಲಿಸಿಕೊಂಡಿದ್ದು ಪ್ರಸ್ತುತ ಹೆಚ್ಚುವರಿ ಪ್ರತಿವಾದ ಪತ್ರ ಸಲ್ಲಿಸಿಕೊಳ್ಳಲು ಹಂತವನ್ನು ನಿಗದಿಪಡಿಸಿದ್ದು, ಆ ಸಮಯದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

6. ಅರ್ಜಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸಿ, ಈ ನ್ಯಾಯಾಲಯದ ಮಧ್ಯಂತರ ಅರ್ಜಿ ಸಂಖ್ಯೆ 11ರ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಲಾಗಿರುತ್ತದೆ, ಹಾಗಾಗಿ ಈ ದಾವೆಯಲ್ಲಿ ಈಗಾಗಲೇ ಪಡೆದ ಖರ್ಚನ್ನು ನ್ಯಾಯಾಲಯಕ್ಕೆ ಠೇವಣಿ ಮಾಡಲು ಅನುಮತಿ ಕೋರಿಕೊಂಡಿರುತ್ತಾರೆ. ಈ ದಾವೆಯಲ್ಲಿ ಈಗಾಗಲೇ ಪ್ರತಿವಾದಿಗಳು

ಖರ್ಚನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶದ ವಿರುದ್ಧ ಅಪೀಲು ಸಲ್ಲಿಸಿರುವ ಕಾರಣ ಈಗಾಗಲೇ ಪಡೆದುಕೊಂಡಿರುವ ಖರ್ಚನ್ನು ಠೇವಣಿ ಮಾಡಲು ಆದೇಶಿಸುವುದು ಸಂಜಸವಾಗಿರುವುದಿಲ್ಲ. ಒಂದು ವೇಳೆ ಈ ನ್ಯಾಯಾಲಯದ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಪಡಿಸಿದ್ದಲ್ಲಿ ಅಥವಾ ವಜಾಗೊಳಿಸಿದ್ದೇ ಆದಲ್ಲಿ ಆಗ ಪ್ರತಿವಾದಿಗಳು ಸದರಿ ಖರ್ಚನ್ನು ನ್ಯಾಯಾಲಯಕ್ಕೆ ಠೇವಣಿ ಮಾಡುವಂತೆ ಆದೇಶಿಸಬಹುದಾಗಿರುತ್ತದೆ. ಈ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸುತ್ತಾರೆ ಎಂಬ ಒಂದೇ ಕಾರಣಕ್ಕಾಗಿ ಈಗಾಗಲೇ ಪಡೆದಿರುವ ಖರ್ಚನ್ನು ಠೇವಣಿ ಮಾಡಲು ಆದೇಶಿಸುವುದು ಅವಶ್ಯಕವೆಂದು ಕಂಡು ಬರದೇ ಇರುವ ಕಾರಣ ಈ ಕೆಳಕಂಡಂತೆ ಮಾಡುವ ಆದೇಶವೆನೆಂದರೆಃ-

**ಆದೇಶ**

ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಹೆಚ್ಚುವರಿ ಪ್ರತಿವಾದ ಪತ್ರವನ್ನು ಸಲ್ಲಿಸಿಕೊಳ್ಳಲು ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕ 12.06.2026.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.